ಓ.ಎಸ್. ನಂಃ 359/2016
ಡಿ.ಡಬ್ಲ್ಯೂ-1 (ವೀರಭದ್ರ)

ದಿನಾಂಕ: 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿ ಇವೆ ಎಂದರೆ ಸರಿ. ನಮ್ಮ ಮನೆತನದ ವ್ಯವಹಾರಗಳನ್ನು ನಮ್ಮ ತಂದೆ ಮಾಡುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿದಾರರು ತಮ್ಮ ತಂದೆ ಮತ್ತು ಅವರ ಎಲ್ಲ ಮಕ್ಕಳು ಸೇರಿ ಮಾಡುತ್ತಾರೆ ಎಂದು ಹೇಳುತ್ತಾರೆ. ನಮ್ಮ ತಂದೆ ಮಾಡಿದ ಎಲ್ಲ ವ್ಯವಹಾರಗಳಿಗೆ ನಮ್ಮ ಒಪ್ಪಿಗೆ ಇದೆ ಎಂದರೆ ಸರಿಯಲ್ಲ.

2. ಈ ದಾವೆಯನ್ನು ಕೆಂಪಣ್ಣಾ ಹುಲ್ಲೋಳಿ ಇವರು ನಮ್ಮ ತಂದೆಯ ಮೇಲೆ ಮಾತ್ರ ಹಾಕಿದ್ದಾರೆ. ಈ ದಾವೆಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೆ ಖರೀದಿ ಪತ್ರ ಬರೆದುಕೊಡಬೇಕೆಂದು ಕೇಳಿದ್ದಾರೆ. ದಾವಾ ಜಮೀನುಗಳು ಜವಳು ಮತ್ತು ಸವಳು ಜಮೀನುಗಳಾಗಿವೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಜವಳು ಮತ್ತು ಸವಳು ಜಮೀನಾಗಿದ್ದರಿಂದ ಸಾಕಷ್ಟು ಉತ್ಪನ್ನ ಬರುವುದಿಲ್ಲ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳಿಂದ ಸರಿಯಾದ ಆದಾಯ ಬರದೇ ಇದ್ದುದ್ದರಿಂದ 2015 ರಲ್ಲಿ ನಾವು ಆರ್ಥಿಕ ಸಂಕಷ್ಟದಲ್ಲಿ ಇದ್ದೆವು ಎಂದರೆ ಸರಿಯಲ್ಲ. ನಮ್ಮ

ತಂದೆ ನಮ್ಮ ಕುಟುಂಬದ ಅಡಚಣೆಗಾಗಿ ಕೈಗಡ ಸಾಲ ಮಾಡಿದ್ದರು ಎಂದರೆ ಸಾಕ್ಷಿದಾರರು ಸಾಲ ಮಾಡಿದ್ದರು ಅದನ್ನು ತೀರಿಸಿದ್ದಾರೆ ಎಂದು ಹೇಳುತ್ತಾರೆ. ಕೈಗಡ ಸಾಲ ತೀರಿಸುವುದಕ್ಕಾಗಿ ನಮ್ಮ ತಂದೆ ಅವರ ಜಮೀನುಗಳನ್ನು ಮಾರಾಟಕ್ಕೆ ತೆಗೆದಿದ್ದರು ಎಂದರೆ ಸರಿಯಲ್ಲ.

3. ನಮ್ಮ ತಂದೆ ಜಮೀನು ಮಾರಾಟ ಮಾಡಲು ತೆಗೆದ ವಿಷಯ ಊರಲ್ಲಿ ಎಲ್ಲ ಹರಡಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ಜಮೀನು ಮಾರಾಟ ಮಾಡಲು ತೆಗೆದ ವಿಚಾರ ವಾದಿಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ವಾದಿ ನಮ್ಮ ಜಮೀನು ಖರೀದಿ ಮಾಡಬೇಕೆಂದು ತಮ್ಮ ಇಚ್ಚೆ ವ್ಯಕ್ತಪಡಿಸಿದ್ದರು ಎಂದರೆ ಸರಿಯಲ್ಲ. ವಾದಿ ಕೆಂಪಣ್ಣಾ ಇವರ ಉದ್ಯೋಗ ಒಕ್ಕಲುತನ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ತಮ್ಮ ಊರಲ್ಲಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

4. ನಾವು, ವಾದಿ ಹಾಗೂ ಸಾಕ್ಷಿದಾರರೆಲ್ಲರೂ ಸೇರಿ ದಾವಾ ಆಸ್ತಿಯ ಮಾರಾಟದ ಕುರಿತು ಮಾತುಕತೆಗೆ ಸೇರಿದ್ದೆವು ಎಂದರೆ ಸರಿಯಲ್ಲ. ದಾವಾ ಜಮೀನುಗಳನ್ನು ರೂ.7,80,000/- ಕ್ಕೆ ವಾದಿಗೆ ಮಾರಾಟ ಮಾಡಲು ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು ರೂ.7,80,000/- ಕ್ಕೆ ಖರೀದಿ ಮಾಡಲು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಖರೀದಿ ಮೊತ್ತ ರೂ.7,80,000/- ಪೈಕಿ ರೂ.7,28,000/- ಮುಂಗಡವಾಗಿ ಕೊಡಬೇಕು ಹಾಗೂ ರೂ.52,000/- ಖರೀದಿ ಕಾಲಕ್ಕೆ ಕೊಡಬೇಕೆಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಈ ಮೇಲೆ ಹೇಳಿರುವ ಎಲ್ಲ

ವಿಷಯಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಖರೀದಿ ಪತ್ರ ಬರೆದುಕೊಡಲು ನಾವು 01 ಅವಧಿ ತೆಗೆದುಕೊಂಡಿದ್ದೇವು ಎಂದರೆ ಸರಿಯಲ್ಲ. ದಿಃ 09/09/2015 ರಂದು ನಾವು, ವಾದಿ ಹಾಗೂ ಸಾಕ್ಷಿದಾರರು ಎಲ್ಲರೂ ಸೇರಿ ದಸ್ತಾವೇಜ ಬರಹಗಾರರಾದ ಶಿರಸಂಗಿಯವರ ಕಚೇರಿಗೆ ಹೋಗಿದ್ದೆವು ಎಂದರೆ ಸಾಕ್ಷಿದಾರರು ತಾವು ರದ್ದು ಮಾಡಿಕೊಂಡು ಬಂದಿದ್ದಾಗಿ ಹೇಳುತ್ತಾರೆ. ರದ್ದು ಮಾಡಿಕೊಂಡು ಬರಲು ನಾನು, ನನ್ನ ಮೂರು ಜನ ಅಣ್ಣ ತಮ್ಮಂದಿಯರು ಹಾಗೂ ನನ್ನ ತಂದೆ ಹೋಗಿದ್ದೆವು. ನಾವು ರೂ.7,28,000/-ದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದಕ್ಕೆ ರದ್ದು ಮಾಡಿಸಿಕೊಂಡು ಬರಲು ಹೋಗಿದ್ದೇವೆ. ರದ್ದು ದಾಖಲೆ ಬರೆಯಲು ದಸ್ತಾವೇಜ ಬರಹಗಾರರಿಗೆ ನಾವು ಮತ್ತು ವಾದಿ ಮಾಹಿತಿ ಕೊಟ್ಟಿರುತ್ತೇವೆ.

6. ನಾನು, ನನ್ನ ತಂದೆ ಮತ್ತು ನನ್ನ ಉಳಿದ ಸಹೋದರರು ಸೇರಿ ಶಿರಸಂಗಿಯವರ ಕಚೇರಿಗೆ ಹೋಗಿ ಖರೀದಿ ಕರಾರ ಪತ್ರ ಬರೆದುಕೊಡಲು ಮಾಹಿತಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಶಿರಸಂಗಿಯವರು ನಾವು ಕೊಟ್ಟ ಹೇಳಿಕೆಯ ಪ್ರಕಾರ ದಾಖಲೆಯನ್ನು ತಯಾರ ಮಾಡಿ ಓದಿ ಹೇಳಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಓದಿ ಹೇಳಿದ್ದು ಸರಿ ಇದೆ ಎಂದು ನಾವು ತಿಳಿದಿರುತ್ತೇವೆ ಎಂದರೆ ರದ್ದು ಮಾಡುವ ಕಾಗದದಲ್ಲಿ ಇರುವ ವಿಷಯ ಸರಿ ಇದೆ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಕೆಂಪಣ್ಣಾ ಇವರು ಸಹ

ದಸ್ತಾವೇಜದಲ್ಲಿ ಬರದ ವಿಷಯ ಸರಿ ಇದೆ ಎಂದು ಹೇಳಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರದ್ದು ಮಾಡಿರುವ ದಾಖಲೆ ಸರಿ ಇರುತ್ತದೆ ಇನ್ನೊಂದು ದಾಖಲೆ ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ.

7. ದಸ್ತಾವೇಜನಲ್ಲಿ ಬರೆದ ವಿಷಯ ಸರಿ ಇದೆ ಎಂದು ಹೇಳಿ ವಾದಿ ಕಡೆಯಿಂದ ನಾವು ರೂ.7,28,000/- ಪಡೆದಿರುತ್ತೇವೆ ಹಾಗೂ ದಾಖಲೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ಸಾಕ್ಷಿದಾರರಿಗೆ ನಿಪಿ-11ರ 3ನೇ ಪುಟವನ್ನು ತೋರಿಸಿ ಅದರ ಬಲಗಡೆ ಇರುವ ಸಹಿ ಯಾರ ಸಹಿ ಎಂದು ಪ್ರಶ್ನಿಸಿದರೆ ಸಾಕ್ಷಿದಾರರು ಅವು ತಮ್ಮ ಸಹಿಗಳಲ್ಲ ಎಂದು ಹೇಳುತ್ತಾರೆ. ನಿಪಿ-11 ರಲ್ಲಿ ನಮ್ಮ ಫೋಟೋಗಳಿವೆ ಎಂದರೆ ಸರಿ. ನಾವು ನಿಪಿ-11 ಕ್ಕೆ ಸಹಿ ಮಾಡಿಕೊಟ್ಟ ನಂತರ ದಸ್ತು ಬರಹಗಾರರು ನಿಪಿ-11ನ್ನು ವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು, ವಾದಿ ಹಾಗೂ ಇಬ್ಬರು ಸಾಕ್ಷಿದಾರರು ಸೇರಿ ಆ ದಾಖಲೆಯನ್ನು ತೆಗೆದುಕೊಂಡು ಉಪ-ನೋಂದಣಿ ಅಧಿಕಾರಿಗಳ ಕಚೇರಿಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆ ದಿವಸ ಸಮಯದ ಆಭಾವ ಇದ್ದುದ್ದರಿಂದ ಆ ದಾಖಲೆ ನೋಂದ ಆಗಲಿಲ್ಲ ಎಂದರೆ ಸಾಕ್ಷಿದಾರರು ತಾವು ಯಾವುದೇ ಕಾಗದ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ನಂತರ ಮಾರನೆ ದಿವಸ ಅಂದರೆ ದಿಃ 10/09/2015 ರಂದು ಉಪ-ನೋಂದಣಿ ಅಧಿಕಾರಿಗಳ ಕಚೇರಿಗೆ ಹೋಗಿ ಸದರಿ ದಾಖಲೆಯನ್ನು ನೋಂದ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

8. ಮಾತುಕತೆ ಸಮಯದಲ್ಲಿ ದಾವಾ ಜಮೀನನ್ನು ರೈತಾವಾ ಮಾಡಿ ಬಿನ್ ಭೋಜಾ ಮಾಡಿಕೊಡುತ್ತೇವೆ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ. ನಿಪಿ-11 ನೋಂದ ಮಾಡಿಸಿಕೊಟ್ಟಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 01 ವರ್ಷದ ಅವಧಿ ಮುಗಿಯುವ ಒಳಗಾಗಿ ಲಿಖಿತ ರೂಪದಲ್ಲಿ ನಾವು ವಾದಿಗೆ ತಿಳಿಸುತ್ತೇವೆ ಎಂದು ಹೇಳಿದ್ದರೂ ಸಹ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾವು ವಾದಿಗೆ ತಿಳಿಸದೇ ಇದ್ದುದ್ದರಿಂದ ವಾದಿ ಅವರ ವಕೀಲರಿಂದ ನಮಗೆ ಒಂದು ನೋಟೀಸು ಕೊಟ್ಟಿದ್ದರು ಎಂದರೆ ಸಾಕ್ಷಿದಾರರು ತಮಗೆ ಯಾವುದೇ ನೋಟೀಸು ಬಂದಿಲ್ಲ ಎಂದು ಹೇಳುತ್ತಾರೆ. ವಾದಿ ಕಳುಹಿಸಿದ ನೋಟೀಸನ್ನು ನಾವು ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ. ಖರೀದಿ ಕರಾರ ಪತ್ರದ ಪ್ರಕಾರ ನಾವು ನಡೆದುಕೊಳ್ಳದೇ ಇದ್ದುದ್ದರಿಂದ ವಾದಿ ನಮ್ಮ ವಿರುದ್ಧ ಈ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ.

9. ದಾವಾ ಆಸ್ತಿಗಳು ನಮ್ಮ ತಂದೆಯ ಮಾಲ್ಕೀ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ.112/8 ರ ಪೂರ್ವಕ್ಕೆ - ವೀರಭದ್ರಪ್ಪ ಬಸಲಿಂಗಪ್ಪ ಕಾಪಶಿ ಇವರ ಜಮೀನು, ಪಶ್ಚಿಮಕ್ಕೆ- ಶಿವಪ್ಪ ಗೌಡರ ಇವರ ಜಮೀನು ಎಂದರೆ ಸರಿ. ದಕ್ಷಿಣಕ್ಕೆ- ಸಂತಿ ಹಾದಿ ಎಂದರೆ ಸರಿಯಲ್ಲ. ಉತ್ತರಕ್ಕೆ- ನರಸಪ್ಪ ನಾಗಪ್ಪ ಕಾಪಶಿ ಇವರ ಜಮೀನು ಎಂದರೆ ಸರಿಯಲ್ಲ, ಹೊಳೆ ಇದೆ ಎಂದು ಹೇಳುತ್ತಾರೆ. ನಾನೇ ಮಾಹಿತಿ ಕೊಟ್ಟು ಚಕ್ಕಬಂದಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಚಕ್ಕಬಂದಿ ನನಗೆ ಸರಿಯಾಗಿ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 359/2016
ಡಿ.ಡಬ್ಲ್ಯು-1 (ವೀರಭದ್ರ)

10. ಸರ್ವೆ ನಂ.351 ರ ಪೂರ್ವಕ್ಕೆ- ಅಲ್ಲ ರಾಮಪ್ಪ ಬೀರನಗಡ್ಡಿ ಇವರ ಜಮೀನು, ಪಶ್ಚಿಮಕ್ಕೆ- ಬಾಳಪ್ಪ ಬೀರನಗಡ್ಡಿ ಇವರ ಜಮೀನು ಎಂದರೆ ಸರಿ. ದಕ್ಷಿಣಕ್ಕೆ- ಮಿಶನ್ ಹಾದಿ ಎಂದರೆ ಸರಿಯಲ್ಲ, ಸಾಕ್ಷಿದಾರರು ಅಡಿವೆಪ್ಪ ತಿಪ್ಪಣ್ಣಾ ಕಂಕಣವಾಡಿ ಇವರ ಜಮೀನು ಇದೆ ಎಂದು ಹೇಳುತ್ತಾರೆ. ಉತ್ತರಕ್ಕೆ- ನರಸಪ್ಪ ನಾಗಪ್ಪ ಕಾಪಶಿ ಇವರ ಜಮೀನು ಎಂದರೆ ಸರಿಯಲ್ಲ, ಮಲ್ಲಪ್ಪ ಅಜ್ಜಪ್ಪ ದಂಡಿನ ಇವರ ಆಸ್ತಿ ಎಂದು ಹೇಳುತ್ತಾರೆ. ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ಬಾಳಪ್ಪ ಬೀರನಗಡ್ಡಿ ಮತ್ತು ನರಸಪ್ಪ ನಾಗಪ್ಪ ಕಾಪಶಿ ಇವರ ಜಮೀನು ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ